ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಮಂಗಳವಾರ, ದಿನಾಂಕ : 23ನೇ ಜುಲೈ, 2019

ತುಂಗಭದ್ರಾ ಅಣೆಕಟ್ಟುವಿನ ಬಗ್ಗೆ

ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-

505 (703) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಭದ್ರಾ ಅಣೆಕಟ್ಟುವಿನ ಕೆಳಭಾಗದಿಂದ ಹಿಡಿದು ತುಂಗಭದ್ರಾ ಅಣೆಕಟ್ಟುವಿನವರೆಗೂ ನೀರಾವರಿ ಹಾಗೂ ಕುಡಿಯುವ ನೀರಿಗೆ ಹಾಗೂ ವಿವಿಧ ಯೋಜನೆಗಳಿಗೆ ಎಷ್ಟು ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಮಂಜೂರಾತಿ ನೀಡಿದೆ ;

(ಆ) ತುಂಗಭದ್ರಾ ವ್ಯಾಪ್ತಿಯ ಸಿಂದನೂರು-ಯರಮರಸ್-ಸಿರವಾರ ಈ ಮೂರು ವಿಭಾಗಗಳಲ್ಲಿ ಬರುವ ಉಪಕಾಲುವೆಗಳಲ್ಲಿ ಹೂಳು ತೆಗೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಕಾಲುವೆಗಳ ಸರ್ವೀಸ್ ರಸ್ತೆಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ಕೃಷ್ಣಾ ನದಿಯ ಗೂಗಲ್ ಬ್ಯಾರಜಿನಿಂದ ಗಣಿಕಲ್ಲ ಸಮತೋಲನ ಜಲಾಶಯಕ್ಕೆ ನೀರು ಒದಗಿಸಲು ರೂ.140 ಕೋಟಿ ರೂಪಾಯಿಗಳ ಏತ ನೀರಾವರಿ ಯೋಜನೆಗೆ ಟೆಂಡರ್ ಕರೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?